# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 179 (273) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಡಿಫೆನ್ಸ್ ಕಾರಿಡಾರ್‌ನ್ನು ಕರ್ನಾಟಕದಲ್ಲಿ ಮಾಡಬೇಕೆಂದು ರಾಜ್ಯ ಸರ್ಕಾರವು ಕೇಂದ್ರವನ್ನು ಕೋರಿದ್ದು, ಇದಕ್ಕೆ ಸ್ಥಳ ನಿಗದಿ ಮಾಡಲಾಗಿದೆಯೇ; ಮಾಡಿದ್ದರೆ, ಎಷ್ಟು ಎಕರೆ ಭೂಮಿ ಮಾಡಲಾಗಿದೆ; ಮತ್ತು ಎಲ್ಲಿ ಮಾಡಲಾಗಿದೆ; | ಉತ್ತರ ಕರ್ನಾಟಕದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಕರ್ನಾಟಕದ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ Defence Industrial Corridor ಮಂಜೂರು ಮಾಡಲು ರಾಜ್ಯ ಸರ್ಕಾರವು ಕೇಂದ್ರ ರಕ್ಷಣಾ ಸಚಿವರಿಗೆ ದಿನಾಂಕ 09.07.2025 ರಂದು ಮನವಿ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರದ ಪ್ರತಿಕ್ರಿಯೆನ್ನು ನಿರೀಕ್ಷಿಸಲಾಗುತ್ತಿದೆ.<br><br>ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಈಗಾಗಲೇ ಕೈಗಾರಿಕಾ ಪ್ರದೇಶಗಳಿಗಾಗಿ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುತ್ತಿದ್ದು, Defence Industrial Corridor ನ್ನು ಕೇಂದ್ರ ಸರ್ಕಾರವು ಅನುಮೋದಿಸಿದ ನಂತರ, ಆ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. |
| ಆ) | ದೇವನಹಳ್ಳಿಯಲ್ಲಿ ಡಿಫೆನ್ಸ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೈಗಾರಿಕೆಗಳು ಬರುವ ಉದ್ದೇಶದಿಂದ ಭೂಮಿಯನ್ನು ರೈತರಿಂದ ಪಡೆಯುವ ಯೋಜನೆಯಾಗಿದ್ದು, ಈಗ ಸರ್ಕಾರವು ಈ ಭೂಮಿಯನ್ನು ರೈತರಿಗೆ ಬಿಟ್ಟು ಕೊಟ್ಟಿರುವುದರಿಂದ ಸದರಿ ಡಿಫೆನ್ಸ್ ಕ್ಷೇತ್ರಕ್ಕೆ ಎಲ್ಲಿ ಸ್ಥಳ ನಿಗದಿ ಮಾಡಲಾಗಿದೆ; | ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಮಲ್ಲೇಪುರ, ಚನ್ನರಾಯಪಟ್ಟಣ, ಪಾಳ್ಯ, ನಲ್ಲೂರು, ಮುದ್ದೇನಹಳ್ಳಿ, ನಲ್ಲಪ್ಪನಹಳ್ಳಿ, ಹರಳೂರು, ಪೋಲನಹಳ್ಳಿ, ಚೀ.ಮಾಚನಹಳ್ಳಿ, ಮಟ್ಟಿಬಾರ್ಲು, ಗೋಕರೆಬಚೇನಹಳ್ಳಿ ಮತ್ತು ಶೋತ್ರಿಯತೆಲ್ಲೂಹಳ್ಳಿ ಗ್ರಾಮಗಳಲ್ಲಿ ಒಟ್ಟು 1777-02 ಎಕರೆ ಜಮೀನಿಗೆ ಕೆಐಎಡಿ ಕಾಯ್ದೆ ಕಲಂ 3(1), 1(3) ಹಾಗೂ 28(1)ರಡಿ ದಿನಾಂಕ:30-08-2021 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಈ ಪೈಕಿ ಮೊದಲನೇ ಹಂತದಲ್ಲಿ ಗೋಕರೆಬಚೇನಹಳ್ಳಿ ಹಾಗೂ ಹ್ಯಾಡಾಳ ಗ್ರಾಮಗಳಲ್ಲಿ ಒಟ್ಟು 439-32 ಎಕರೆ ಜಮೀನಿಗೆ |
| ಇ) | ಕರ್ನಾಟಕ ಬಂಡವಾಳ ಸೆಳೆಯುವ ನೀತಿಗೆ ಈ ನಿರ್ಣಯ ತೊಂದರೆಯಾಗುವುದಿಲ್ಲವೇ; ರಕ್ಷಣಾ ವಲಯಕ್ಕೆ ಆದ್ಯತೆ ನೀಡುವ ನೀತಿಯಿಂದ ಹಿಂದೆ ಸರಿದಂತಾಗುವುದಿಲ್ಲವೇ; | |

| | | |
|---|---|---|
| ಈ) | ಭೂಮಿಯನ್ನು ರಕ್ಷಣಾ ವಲಯದ ಕೈಗಾರಿಕೆಗಳಿಗೆ ನೀಡಲು ಸ್ಥಳ ಗುರುತಿಸಲಾಗಿದೆಯೇ; ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪವಿರುವ ಮತ್ಯಾವ ಸ್ಥಳವನ್ನು ಗುರುತಿಸಲಾಗಿದೆ; ನಮ್ಮ ನೆರೆ ರಾಜ್ಯಗಳು ನಮ್ಮ ನಿರ್ಣಯದ ಲಾಭವನ್ನು ಪಡೆಯದಂತೆ ಯಾವ ರೀತಿಯ ಜಾಗರೂಕತೆಯನ್ನು ವಹಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು) | ದಿನಾಂಕ:28-06-2024 ರಂದು ಹಾಗೂ ಎರಡನೇ ಹಂತದಲ್ಲಿ ಪಾಳ್ಯ, ಹರಳೂರು, ಪೋಲನಹಳ್ಳಿ, ನಲ್ಲೂರು, ಮಲ್ಲೇಪುರ, ನಲ್ಲಪ್ಪನಹಳ್ಳಿ, ಚೀ.ಮಾಚನಹಳ್ಳಿ ಮತ್ತು ಮುದ್ದೇನಹಳ್ಳಿ ಗ್ರಾಮಗಳಲ್ಲಿನ ಜಮೀನನ್ನು ಅಂತಿಮವಾಗಿ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಒಟ್ಟು 841-26.12 ಎಕರೆ ಜಮೀನಿಗೆ ದಿನಾಂಕ:19-04-2025 ರಂದು ಕಲಂ 28(4)ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br><br>ಆದರೆ, ಭೂಮಾಲೀಕರುಗಳು ಸದರಿ ಭೂಸ್ವಾಧೀನವನ್ನು ವಿರೋಧಿಸಿ ಸತತವಾಗಿ ಧರಣಿ ನಡೆಸಿ ತಮ್ಮ ಜಮೀನುಗಳನ್ನು ಕೈಬಿಡುವ ಬಗ್ಗೆ ಒತ್ತಾಯಿಸಿದ್ದು, ತದನಂತರದಲ್ಲಿ ದಿನಾಂಕ: 15.07.2025 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದು ಅಂತಿಮವಾಗಿ ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವುದು ಎಂದು ತೀರ್ಮಾನಿಸಲಾಗಿರುತ್ತದೆ.<br><br>ಆದರೆ, ಒಂದೊಮ್ಮೆ ಭೂಮಾಲೀಕರು ಸ್ವಯಂ ಪ್ರೇರಣೆಯಿಂದ ಭೂಸ್ವಾಧೀನಕ್ಕೆ ಒಪ್ಪಿ ಮುಂದೆ ಬಂದಲ್ಲಿ ಸದರಿಯವರ ಜಮೀನಿಗೆ ಉತ್ತಮ ಹಾಗೂ ನ್ಯಾಯಯುತವಾದ ಪರಿಹಾರ ನೀಡಲಾಗುವುದು ಹಾಗೂ ಭೂಪರಿಹಾರದ ಬದಲಿಗೆ ಅಭಿವೃದ್ಧಿಪಡಿಸಿದ ನಿವೇಶನವನ್ನು ಪಡೆಯಲು ಅಪೇಕ್ಷಿಪಟ್ಟಲ್ಲಿ ನಿಯಮಾನುಸಾರ ಹಂಚಿಕೆ ಮಾಡಲಾಗುವುದು ಎಂದು ತೀರ್ಮಾನಿಸಲಾಗಿರುತ್ತದೆ.<br><br>ಮುಂದುವರೆದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಹಾಗೂ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಾಕಷ್ಟು ಕೈಗಾರಿಕಾ ಪ್ರದೇಶಗಳನ್ನು ಮಂಡಳಿಯು ಸ್ವಾಧೀನಪಡಿಸಿ ಅಭಿವೃದ್ಧಿಪಡಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತಾವಿತ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯ ಭೂಸ್ವಾಧೀನದ ಬಗ್ಗೆ ಕೈಗೊಂಡಿರುವ ತೀರ್ಮಾನದಿಂದ, ನೆರೆಯ ರಾಜ್ಯಗಳು ಯಾವುದೇ ಲಾಭವನ್ನು ಪಡೆಯಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಸಿಐ 418 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು